**ಸಿಸಿ ಸಂಖ್ಯೆ -1296/2024** **ಪಿ.ಡಬ್ಲ್ಯೂ:-1**

ದಿನಾಂಕಃ **16-09-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ :-

ನಾನು ವ್ಯವಸಾಯ ಕೆಲಸವನ್ನು ಹೊರತುಪಡಿಸಿ ಬೇರೆ ಯಾವುದೇ ಕೆಲಸವನ್ನು ಮಾಡುವುದಿಲ್ಲ. ನಾನು ಗುತ್ತಿಗೆ ಅಥವಾ ಬಡ್ಡಿ ವ್ಯವಹಾರದ ಕೆಸವನ್ನು ಮಾಡುತ್ತಿರುವುದಿಲ್ಲ. ನಾನು ಮತ್ತು ಆರೋಪಿ ಪಿ.ಯು.ಸಿ ವಿದ್ಯಾಭ್ಯಾಸ ಮಾಡುವ ಸಮಯದಲ್ಲಿ ಸಹಪಾಠಿಗಳು. ನಮ್ಮ ಊರಿನಿಂದ ಆರೋಪಿಯ ಊರಿಗೆ ಸುಮಾರು 5-6 ಕಿ.ಮೀ ಅಂತರವಿರುತ್ತದೆ. ಆರೋಪಿಯು ರಾಜಕೀಯ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ಆರೋಪಿಯು ಯಾವುದೇ ರಾಜಕೀಯ ಜನ ಪ್ರತಿನಿಧಿಯ ಸ್ಥಾನಮಾನವನ್ನು ಹೊಂದಿರುವುದಿಲ್ಲ.ಅರೋಪಿಯು ಕ್ಲಾಸ್ 1 ಗುತ್ತಿಗೆದಾರರು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನನಗೆ 4 ½ ಎಕರೆ ಜಮೀನು ಇರುತ್ತದೆ. ಅದರಲ್ಲಿ ½ ಎಕರೆ ಜಮೀನನ್ನು ಮಾರಾಟ ಮಾಡಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.